ಭಾಲ್ಕಿ ಪುರಸಭೆಗೆ ನೌಕರರ ನೇಮಕ

132 (291) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾಲ್ಕಿ ಪುರಸಭೆಗೆ ಮಂಜೂರಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು;

ಆ) ಈ ಪೈಕಿ ಯಾವ ಯಾವ ಹುದ್ದೆಗಳು ಭರ್ತಿಯಾಗಿವೆ ಹಾಗೂ ಯಾವ ಯಾವ ಹುದ್ದೆಗಳು ಎಷ್ಟು ಅವಧಿಯಿಂದ ಖಾಲಿ ಇವೆ ಮತ್ತು ಇದಕ್ಕೆ ಕಾರಣಗಳೇನು;

ಇ) ಈ ಪುರಸಭೆಯಲ್ಲಿ ಮುಖ್ಯಾಧಿಕಾರಿ ಹುದ್ದೆಯೂ ಸೇರಿದಂತೆ ಅನೇಕ ಹುದ್ದೆಗಳು ಖಾಲಿ ಇರುವುದರಿಂದ ಎಸ್.ಎಫ್.ಸಿ ಯೋಜನೆಯಲ್ಲಿ ಬಿಡುಗಡೆಯಾದ ಹಣ ಖರ್ಚಾಗದೇ ಇರುವುದರಿಂದ ಇಲ್ಲಿ ಅಭಿವೃದ್ಧಿ ಕಾರ್ಯಗಳು ಕುಂಠಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಸರ್ಕಾರ ಭಾಲ್ಕಿ ಪುರಸಭೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ತುರ್ತಾಗಿ ಭರ್ತಿ ಮಾಡಲು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಬಾಲಚಂದ್ರ ಜಾರಕಿ ಹೊಳಿ. (ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವರು) :

ಅ) ವ್ಯಂದ ಮತ್ತು ನೇಮಕಾತಿ ಆದೇಶದನ್ವಯ ಭಾಲ್ಕಿ ಪುರಸಭೆಗೆ ಒಟ್ಟು 103 ಹುದ್ದೆಗಳು ಮಂಜೂರಾಗಿರುತ್ತದೆ.

ಆ) ಮಂಜೂರಾದ ಹುದೆಗಳ ಪೈಕಿ 26 ಮಂದಿ ಖಾಯಂ ನೌಕರರು, 37 ಮಂದಿ ಗುತ್ತಿಗೆ/ಸಮಾನ ಕೆಲಸಕ್ಕೆ ಸಮಾನ ವೇತನದ ನೌಕರರು ಕಾರ್ಯನಿರ್ವಹಿಸುತ್ತಿದ್ದು, ಒಟ್ಟಾರೆಯಾಗಿ 63 ಹುದ್ದೆಗಳು ಭರ್ತಿಯಾಗಿದ್ದು, 40 ಹುದ್ದೆಗಳ ಖಾಲಿ ಇದೆ. ಖಾಲಿ ಇರುವ ಹುದ್ದೆಗಳು ಆಗಿಂದಾಗ್ಗೆ ಭರ್ತಿಯಾಗುವುದು ಮತ್ತು ಖಾಲಿಯಾಗುವುದು ಆಗುತ್ತಿರುವು ದರಿಂದ, ಹುದ್ದೆಗಳ ಖಾಲಿಯಾದ ದಿನಾಂಕಗಳನ್ನು ಹೇಳುವುದು ಕಷ್ಟಸಾಧ್ಯ ಅಂಶವಾಗಿದೆ. ಆದಾಗ್ಯೂ ನೇರನೇಮಕಾತಿ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ. ಖಾಲಿ ಹುದ್ದೆಗಳ ಬಗ್ಗೆ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಹೌದು.

ಈ) ಪರಿಸರ ಅಭಿಯಂತರರು, ಕಿರಿಯ ಅಭಿಯಂತರರು, ಅಕೌಂಟೆಂಟ್, ಪ್ರಥಮ ದರ್ಜೆ ಸಹಾಯಕರು, ಪ್ರಥಮ ದರ್ಜೆ ಕಂದಾಯ ನಿರೀಕ್ಷಕರ ಹುದ್ದೆಗಳ ನೇರನೇಮಕಾತಿ ಪ್ರಕ್ರಿಯೆಯು ಜಾರಿಯಲ್ಲಿದ್ದು, ಉಳಿದ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ಬೀದರ್ ಜಿಲ್ಲೆಯ ಪೊಲೀಸ್ ಠಾಣೆಗಳ ವಿವರಗಳ ಬಗ್ಗೆ

(292) 133 ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿರುವ ಪೊಲೀಸ್ ಠಾಣೆಗಳು ಮತ್ತು ಡಿ.ವೈ.ಎಸ್.ಪಿ. ಅಧಿಕಾರಿಗಳ ಕಛೇರಿಗಳ ಸಂಖ್ಯೆ ಎಷ್ಟು;

ಆ) ಈ ಠಾಣೆಗಳು ಮತ್ತು ಕಛೇರಿಗಳ ವ್ಯಾಪ್ತಿ ಎಷ್ಟು (ಯಾವ ಯಾವ ತಾಲ್ಲೂಕುಗಳ ಗ್ರಾಮಗಳು ಈ ಠಾಣೆಗಳ ವ್ಯಾಪ್ತಿಗೆ ಬರುತ್ತವೆ ಎಂಬ ವಿವರಗಳನ್ನು ಒದಗಿಸುವುದು;

ಇ) ಸಂಬಂಧಪಟ್ಟ ಠಾಣೆಗಳ ವ್ಯಾಪ್ತಿಯನ್ನ ಸಂಬಂಧಪಟ್ಟ ತಾಲ್ಲೂಕಿನ ಕೇಂದ್ರ ಸ್ಥಾನವನ್ನು ಹೊರತುಪಡಿಸಿ ಬೇರೆ ತಾಲ್ಲೂಕಿನ ಠಾಣೆಗಳಿಗೆ ವಹಿಸಿರುವುದು ನಿಜವೇ;

ಈ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು;

ಉ) ಸಾರ್ವಜನಿಕ ಹಿತದೃಷ್ಟಿಯಿಂದ ಒಂದು ತಾಲ್ಲೂಕಿನ ಠಾಣೆಯ ವ್ಯಾಪ್ತಿಯನ್ನು ಈಗಿರುವ ಪದ್ಧತಿಯಂತೆ ಬೇರೆ ತಾಲ್ಲೂಕಿನ ವ್ಯಾಪ್ತಿಗೆ ತರುತ್ತಿರುವುದನ್ನು ಕೈಬಿಟ್ಟು ಅದೇ ತಾಲ್ಲೂಕಿನೊಳಗೆ ಬರುವಂತೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಡಾ॥ ವಿ.ಎಸ್.ಆಚಾರ್ಯ (ಗೃಹ ಸಚಿವರು) :

ಅ) ಬೀದರ್ ಜಿಲ್ಲೆಯಲ್ಲಿ ಒಟ್ಟು 28 ಪೊಲೀಸ್ ಠಾಣೆಗಳು ಹಾಗೂ 3 ಡಿವೈಎಸ್‌ಪಿ ಕಛೇರಿಗಳು ಕಾರ್ಯನಿರ್ವಹಿಸುತ್ತಿವೆ.

ಆ) ವಿವರವನ್ನು ಅನುಬಂಧದಲ್ಲಿ ಒದಗಿಸಿದೆ.